ಕೇಳುವವರು ದಿಕ್ಕು ಇರುವುದಿಲ್ಲ. ಅನೇಕ ಕಡೆ ಪಂಚಾಯಿತಿ ಚೀರಮನ್‌ರು ಅದರೂ ಕೂಡ 4-5- ತಿಂಗಳು ಸಭೆಗೆ ಅಟೆಂಡ್ ಮಾಡಿ ಕೊಡದೆ ಇದ್ದರು ಸುಮ್ಮನೆ ಕುಳಿತಿದ್ದಾರೆ. ಮೂಕ ಜನರು ಇದರ ಅರ್ಥ ನನಗೆ ಆಗುತ್ತಿಲ್ಲ.

(ಊ) ಮೈಸೂರು ನಗರ ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಗಳ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಅಧ್ಯಕ್ಷರೇ, ನಮ್ಮ ಸದಸ್ಯರು ಬಾವಿಯಲ್ಲಿ ಇದ್ದಾರೆ. ಇವರು ಹೋದ ವಾರ ಅಲ್ಲಿರುವ ಕಮೀಷನ್‌ರರಿಗೆ ಪತ್ರವನ್ನು ಕೊಟ್ಟಿದ್ದಾರೆ. ಸಚಿವರಿಗೆ ಪತ್ರವನ್ನು ಕೊಟ್ಟಿದ್ದಾರೆ, ತಮಗೂ ಕೂಡ ನಿನ್ನ ಬರೆದು ಕೊಟ್ಟಿದ್ದಾರೆ. ಸಂಬಂಧಪಟ್ಟವರಿಗೆ ಮುಂಚೆಯೇ ಕೊಟ್ಟಿದ್ದಾರೆ. ಉದ್ದೇಶವಾಗಿ ನಿಮ್ಮ ಬಜೆಟ್ ಮೇಲೆ ಓಟಿಂಗ್ ಇಟ್ಟುಕೊಂಡು ಅವತ್ತು ಚುನಾವಣೆಯನ್ನು ಇಟ್ಟರೆ ಏನು ಮಾಡಬೇಕು ಹಾಗೆ ಅಧಿವೇಶನವನ್ನು ತಪ್ಪಿಸಿಕೊಳ್ಳುವುದೇ?

ಅಧ್ಯಕ್ಷರು:- ಬಜೆಟ್ ಮೇಲೆ ಓಟಿಂಗ್ 26ನೇ ತಾರೀಖಿಗೆ ಇಲ್ಲ. 27 ರಂದು ಇದೆ. ಅದು ಅವರ ವಿವೇಚನೆಗೆ ಬಿಟ್ಟಿದ್ದುದು. ನಾನು ಬರಬೇಡವೆಂದು ಹೇಳುತ್ತೇನೋ?

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮುಖಾಂತರ ಮೇಯರ್ ಚುನಾವಣೆಯನ್ನು ಮುಂದಕ್ಕೆ ಹಾಕಿ ಎಂದು ಕೇಳಿಕೊಳ್ಳುತ್ತಿದ್ದಾರೆ ತಮ್ಮ ಮೂಲಕ ಸರ್ಕಾರವನ್ನು ಕೇಳಿರುವುದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕುವುದು ಒಳ್ಳೆಯ ಸಂಪ್ರದಾಯವಾಗುತ್ತದೆ. ಮುಂದಕ್ಕೆ ಹಾಕದಿದ್ದರೆ ಉದ್ದೇಶಪೂರ್ವಕವಾಗಿ ಮತದಾನದಿಂದ ಹೊರಗೆ ಇಟ್ಟು ನಾವು ರಾಜಕೀಯವನ್ನು ಮಾಡಿ ಗೆಲ್ಲಬೇಕು ಎನ್ನುವ ತಂತ್ರ ನಡೆಯುತ್ತದೆ, ಆ ತಂತ್ರ ಬೇಕಾದಲ್ಲಿ ಸರ್ಕಾರಕ್ಕೆ ನೇರವಾಗಿ ಹೇಳುತ್ತೇವೆ, ನಿಮ್ಮ ತಂತ್ರವನ್ನು ಬೀದಿಗೆ, ಸಾಕಿ ನೇರವಾಗಿ ಅವಕಾಶ ಕೊಡಿ ಎಂದು ಅಷ್ಟೆ ನಾವು ಹೇಳುತ್ತಿರುವುದು.

ಶ್ರೀ ಸಿದ್ಯರಾಮಯ್ಯ(ಉಪ ಮುಖ್ಯಮಂತ್ರಿಗಳು):- ಅಧ್ಯಕ್ಷರೇ, ಒಂದು ವರ್ಷದ ಅವಧಿ ಮುಗಿದ ಮೇಲೆ ಸಭೆಯನ್ನು ನಿಗದಿ ಮಾಡುವವರು ಮೇಯರ್‌ವರು. ಅವರು ದಿನಾಂಕವನ್ನು ನಿಗದಿ ಮಾಡುತ್ತಾರೆ. ಸರ್ಕಾರವನ್ನು ಕೇಳಿ ಯಾವ ದಿನಾಂಕವನ್ನು ನಿಗದಿ ಮಾಡುವುದಿಲ್ಲ. ಅವರು 26ನೇ ದಿನಾಂಕವನ್ನು ನಿಗದಿ ಮಾಡಿದ್ದಾರೆ, ಅವರು ಸರ್ಕಾರವನ್ನು ಕೇಳಿರುವುದಿಲ್ಲ, ನಮ್ಮನ್ನು ಕೇಳಿರುವುದಿಲ್ಲ ಅವರಿಗೆ ಅಧಿಕಾರ ಇರುವುದರಿಂದ ಅವರು ಕಾನೂನಿನ ರೀತಿಯಲ್ಲಿ ಅದನ್ನು ಮಾಡಿದ್ದಾರೆ. ಅದನ್ನು ಮುಂದಕ್ಕೆ ಹಾಕುವುದು ಕೂಡ ಸರ್ಕಾರದಿಂದ ಸಾಧ್ಯವಿಲ್ಲ. ಅದರ ಬಗ್ಗೆ ನಾವು ಎಷ್ಟೇ ಚರ್ಚೆ ಮಾಡಿದರೂ ಕೂಡ....ಅದನ್ನು ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು:- ಅವತ್ತು ಎಷ್ಟು ಗಂಟೆಗೆ ಚುನಾವಣೆ ಇದೆ?

ಶ್ರೀ, ಎಸ್.ಸುರೇಶಕುಮಾರ್ (ರಾಜಾಜಿನಗರ):- ಮೇಯರ್ ಉಪಮೇಯರ್ ಚುನಾವಣೆಯ ಜೊತೆಗೆ? transferable vote method ಇರುವುದರಿಂದ ಅಂದು ನಮ್ಮ ಸದಸ್ಯರು ಅಲ್ಲಿ ಇರಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಲ ಸಮಯವನ್ನು ನಿಗದಿ ಮಾಡಿದ ಮೇಲೆ ಮತ್ತೆ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಂದೂಡುವುದೆ ಒಂದು ಕಾರ್ಯಕ್ರಮವಾಗಿದೆ. ಅದು ಸ್ಥಾಯಿ ಸಮಿತಿ ಇರಬಹುದು, ಅಥವಾ ಮೇಯರ್ ಚುನಾವಣೆ ಇರಬಹುದು. ನಮ್ಮ

ಮಾನ್ಯ ಸದಸ್ಯರು ಕೇಳಿಕೊಳ್ಳು ವುದೇನೆಂದರೆ ನೀವೆ ಆ ಆಕ್ಟ್ ಅವಕಾಶವನ್ನು ಕೊಟ್ಟಿದ್ದೀರಿ ಶಾಸಕರು ಮತ್ತು ವಿಧಾನ ಪರಿಷತ್ತು ಸದಸ್ಯರು ಓಟು ಹಾಕಬಹುದೆಂದು; ಅದನ್ನು ಕೊಡದಿದ್ದರೆ ಇವತ್ತು ಅವರು ಕೇಳುತ್ತಿರಲಿಲ್ಲ.

ಶ್ರೀ ಎನ್. ರಾಜಣ್ಣ:- ಅಧ್ಯಕ್ಷರೇ, ಇದು ಏಕಾಯಿಂತೆಂದೆ, ನಾಲ್ಕು ಕಮಿಟಿಯಿಂದ 8 ಕಮಿಟಿಗಳನ್ನು ಮಾಡಬೇಕೆಂದು ಸಭೆಯನ್ನು ಮುಂದೂಡಿದೆವು.

ಅಧ್ಯಕ್ಷರು:- ಮಾನ್ಯ ಉಪ ಮುಖ್ಯಮಂತ್ರಿಗಳ ಏನು ಹೇಳುತ್ತಾರೆಂದರೆ ಅದು ಮೇಯರ್ ವ್ಯಾಪ್ತಿಗೆ ಬರುವುದರಿಂದ ಅವರು ದಿನಾಂಕವನ್ನು ನಿಗದಿ ಮಾಡುತ್ತಾರೆ. ನಾವು ಅದರಲ್ಲಿ ಭಾಗವಹಿಸುವುದಕ್ಕೆ ಬರುವುದಿಲ್ಲ; The Government does not want to interfere with that.

SRI S. SURESH KUMAR:- If it is a general policy I would have agreed. The Government is interfering in everything. Here, ಇಲ್ಲಿ ಸದಸ್ಯರ ಹಾಜರಾತಿ ಪ್ರಶ್ನೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಕಾನೂನಿನ ಬಲಕ್ಕಿಂತ ಹೆಚ್ಚಾಗಿ ಯಾವ ಸಂಪ್ರದಾಯ ಇದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಲಿ.

ಶ್ರೀ ಎಸ್. ಸುರೇಶ್‌ಕುಮಾರ:- ಬೇಳಿಗ್ಗೆ 11 ಗಂಟೆಯಿಂದ ಸ್ಥಾಯಿ ಸಮಿತಿಗಳು ಪ್ರಾರಂಭವಾಗುತ್ತದೆ.

ಅಧ್ಯಕ್ಷರು:- ಎರಡು ಅಥವಾ ಎರಡುವರೇ ಗಂಟೆ ಸಮಯಕ್ಕೆ ಇಲ್ಲದೆ ಬರಬಹುದು. ಓಟಿಂಗ್ ಮರುದಿವಸ ತಾನೆ? ಇಂಪಾರ್ಟೆಂಟ್ ಬಿಸಿನೆಸ್ ಏನು ಇಲ್ಲವಲ್ಲಾ? ಆ ಸದಸ್ಯಗೆ ಕೆಲಸ ಇದ್ದಾಗ ಬೇರೆ ಸದಸ್ಯರು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲವೋ? ಏಕೆ ಅದನ್ನು ಒಂದು ದೊಡ್ಡ ಇಷ್ಯೂ ಆಗಿ ಮಾಡಿಕೊಳ್ಳುತ್ತೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಹೇಮಾವತಿ ನಾಲಿಯಿಂದ ತುಮಕೂರು ಮತ್ತು ತಿಪಟೂರು ಪಟ್ಟಣಕ್ಕೆ ಕುಡಿಯುವುದಕ್ಕೆ ನೀರು ಕೊಡಬೇಕಾಗಿತ್ತು. ಈಗಾಗಲೇ ಈಚನೂರು ಮತ್ತು ಬುಗಟನೂರ ಕೆರೆಯಲ್ಲಿ.

ಅಧ್ಯಕ್ಷರು:- ಒಂದು ನಿಮಿಷ ಮಾಧ್ಯಸ್ವಾಮಿಯರೇ ನೋಡಿ ಪವಾರ್, ನಿಮ್ಮ ಸರ್ಕಾರ ಇವತ್ತು ಕೇಂದ್ರದಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದೆ. ನಿಮ್ಮ ನಾಯಕರು ಇಲ್ಲ ಉಪ ನಾಯಕರು ಅಲ್ಲಿ ಕುಳಿತಿದ್ದಾರೆ. ಕೆಲರು ಬಂದು ಇಲ್ಲಿ ಬಾವಿಯಲ್ಲಿ ನಿಂತು ಬಿಟ್ಟಿದ್ದೀರಿ. ನಿಮ್ಮ ಪಕ್ಷದಲ್ಲಿ ಒಳಜಗಳ ಇಲ್ಲ; ಬಹಳ ಗೌರವ ಇದೆ. ನೀವು ಈ ರೀತಿ ಮಾಡಿದರೆ ಪತ್ರಿಕೆಯವರು ಬರೆದರೆ, ಪಕ್ಷದಲ್ಲಿ ಒಡಕು ಇದೆ. ಇವರು ಇಲ್ಲಿ ಬಂದರು ನಿಂತು ಕೊಂಡರು, ಅವರು ಆ ಕಡೆಗೆ ನೀವು ಈ ಕಡೆಗೆ ಎಂದು ಇದು ಅಪಾಯವಾಗಿ ಬಿಡುತ್ತದೆ.

(ಗೊಂದಲ)

(ಧರಣಿಯಲ್ಲಿ ಪಾಲ್ಗೊಂಡ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಮರಳಿದರು)

ಈಗ ಒಗ್ಗಟ್ಟಾಗಿ ಇದ್ದೀರಿ ಎಂದು ನನಗೆ ಗೊತ್ತಾಯಿತು ಮತ್ತು ಸಂತೋಷವಾಯಿತು.

ಅಧ್ಯಕ್ಷರು:- ಮಾನ್ಯ ಕರ್ಕಿಯವರೇ, ನಿಮ್ಮಲ್ಲಿ ಐಕ್ಯತೆ ಇದೆ ಆದರೆ ಸ್ವಲ್ಪ ಶಿಸ್ತಿನ ಕೊರತೆ ಇದೆ ಎಂಬುದು ಗೊತ್ತಾಯಿತು.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ಯಾರಿಗೆ ಹೊಟ್ಟೆ ಕಡಿತ ಇದೆಯೋ ಅವರು ಅಜವಾನ್ ತಿನ್ನಬೇಕೆಂಬ ಗಾದೆ ಮಾತು ಈಗ ನಮಗೆ ಅರ್ಥವಾಯಿತು. ಅದಕ್ಕಾಗಿ ಸಂಬಂಧಪಟ್ಟವರು ಮಾತ್ರ ವೆಲ್‌ಗೆ ಬಂದಿದ್ದಾರೆ. ನೀವು ಎಲ್ಲರಿಗೂ ಬನ್ನಿ ಅಂದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಸಭಾಧ್ಯಕ್ಷರೇ, ಮತ್ತೊಮ್ಮೆ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಬೇಕು ಮತ್ತು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ you use your good officers and ask them. ಅಲ್ಲಿ ನಿಮ್ಮ ಪಕ್ಷದವರೇ ಮೇಯರ್ ಇರುವುದು.

MR. SPEAKER:- Yes. That is a proper approach ತಾವು ಎಕ್ಸಾಮಿನ್ ಮಾಡಿ. ಉಪ-ಮುಖ್ಯಮಂತ್ರಿಯವಾರಾದರೂ ನಮಗೆ ಸಹಾಯ ಮಾಡಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಾನು ತಮಗೆ ಸಹಾಯ ಮಾಡುತ್ತೇನೆ. ಮಾನ್ಯ ಸುರೇಶ್‌ಕುಮಾರ್‌ರವರಿಗೆ ಬೆಂಗಳೂರಲ್ಲಿ ಕಾರ್ಪೊರೇಟರ್ ಆಗಿ ಬಹಳ ಅನುಭವವಿದೆ. ಕಾನೂನಿನ ಅಡಿಯಲ್ಲಿ ಒಂದು ವರ್ಷ ಮುಗಿಯುತ್ತಿದ್ದಾಗಲೇ ಚುನಾವಣೆ ಮಾಡಿ. ಅದನ್ನು ಪ್ರಿಸೈಡ್ ಮಾಡತಕ್ಕಂಥರರು ಅವರು.

ಶ್ರೀ ವಾಟಾಳ್ ನಾಗರಾಜ್:- ಇದು ಬುದ್ದಿವಂತಿಕೆಯಿಂದ ಗೆಲ್ಲುತಕ್ಕಂಥಾದ್ದು. ಈ ಒಂದು ತಂತ್ರವನ್ನು ಅವರು ಮಾಡಿಕೊಂಡಿದ್ದಾರೆ. ಅದರಲ್ಲಿ ಏನೂ ಅನುಮಾನವಿಲ್ಲ.

ಅಧ್ಯಕ್ಷರು:- ಸುರೇಶ್‌ಕುಮಾರ್‌ರವರು Hon'ble Dy.Leader of BJP is very fair. ಅವರು ಹೇಳಿದರು " use your good offices." I would request the Government to kindly examine that request. ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹಿಂದಿರುಗಬೇಕು. ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿ. ಕ್ಷಮಿಸಿ ಮೊನ್ನೆ ತಾವು ಭಾಷಣ ಮಾಡುವಾಗಲೂ ಕೂಡ ನಿಮ್ಮನ್ನು ಏಳಿಸುವುದು, ಕೂಡಿಸುವುದು ಆಯಿತು.....

(ಎ) ಹೇಮಾವತಿ ನಾಲೆಯಿಂದ ತುಮಕೂರು ಹಾಗೂ ತಿಪಟೂರಿಗೆ ನೀರು ಸರಬರಾಜು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಸನ್ಮಾನ್ಯ ಅಧ್ಯಕ್ಷರೇ, ಹೇಮಾವತಿ ನಾಲೆಯಿಂದ ತಿಪಟೂರು, ಅರಸೀಕೆರೆ, ತುಮಕೂರುಗಳಿಗೆ ಕುಡಿಯುವ ನೀರನ್ನು ಕೂಡಿ ಕೊಡಬೇಕಾಗಿರುತ್ತದೆ. ಕಳೆದ ಸಾರಿ ಗೋರೂರಿನಲ್ಲಿ ನಡೆದ ಐಸಿಸಿ ಸಮಿತಿಯಲ್ಲಿ ಫೆಬ್ರವರಿಯಿಂದ ಏಪ್ರಿಲ್ ವರೆಗೆ ನಾಲೆಯಲ್ಲಿ ನೀರು ಬಿಡುತ್ತೇವೆ. ಆಗ ಈಚನೂರು ಮತ್ತು ಬುಗುಟನಹಳ್ಳಿ ಕೆರೆಗಳು ತುಂಬಬೇಕು ಎಂದು ನಿರ್ಣಯವಾಗಿತ್ತು. ಐದು ಟಿಎಂಸಿ ನೀರನ್ನು ಅದಕ್ಕಾಗಿಯೇ ಮೀಸಲಟ್ಟಿತ್ತು. ಆದರೆ ಊವರೆವಿಗೂ ಆ ನಾಲೆಯಲ್ಲಿ ನೀರು ಬಿಡಲಿಲ್ಲ. ಈಚನೂರು ಕೆರೆಯಲ್ಲಿ ಈಗಾಗಲೇ ನೀರು ಖಾಲಿಯಾಗಿದೆ. ತಿಪಟೂರು ಮತ್ತು ಅರಸೀಕೆರೆಗೆ ನೀರು ತೆಗೆದುಕೊಳ್ಳ ಬೇಕಾಗಿದ್ದು ಜನರು ಆತಂಕಕ್ಕೊಳಗಾಗಿದ್ದಾರೆ. ಬುಗುಟನಹಳ್ಳಿ ಕೆರೆಯಲ್ಲಿಯೂ ಕೂಡ ಸ್ವಲ್ಪ ಪ್ರಮಾಣದಲ್ಲಿ ನೀರು ಉಳಿದಿದೆ. ಆ ನೀರನ್ನು ನೀವೇನಾದರೂ ಕೊಡಲು ಪ್ರಾರಂಭಮಾಡಿದ್ದರೆ ಅದು ಕೂಡ ಸಾಕಾಗುತ್ತಿರಲಿಲ್ಲ. ಎಂದು ಕಡೆ ಬೇಸಿಗೆ ಕಾಲ, ಇನ್ನೊಂದು